## ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1075 |
| ಸದಸ್ಯರ ಹೆಸರು : | ಶ್ರೀ. ಅರುಣ್ ಶಹಾಪುರ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 19.12.2018. |
| ಉತ್ತರಿಸುವ ಸಚಿವರು : | ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬೆಂಗಳೂರು, ಮೈಸೂರು, ಮಂಡ್ಯ ಮುಂತಾದ ಭಾಗಗಳಲ್ಲಿ ಭಾರಿ ಪ್ರಮಾಣದ ಶಬ್ದ ಉಂಟಾಗಿರುವ ವರದಿ ಬಂದಿದೆಯೇ; | ಮೈಸೂರು, ಮಂಡ್ಯ ಮುಂತಾದ ಭಾಗಗಳಲ್ಲಿ ಭಾರಿ ಪ್ರಮಾಣದ ಶಬ್ಧ ಉಂಟಾಗಿರುವ ವರದಿಯು ಬಂದಿರುತ್ತದೆ. |
| ಆ) | ಇದಕ್ಕೆ ಕಾರಣ ಏನು; ಜನರಲ್ಲಿ ಆತಂಕ ಮೂಡಿಸಿರುವ ಈ ವರದಿಯ ಕುರಿತು ಸರ್ಕಾರದ ಬಳಿ ಇರುವ ಸಂಪೂರ್ಣ ಮಾಹಿತಿ ಹಾಗೂ ಪರಿಹಾರೋಪಾಯಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಕೃಷ್ಣರಾಜಸಾಗರ ಜಲಾಶಯದ ಸುರಕ್ಷತೆಗೆ ಸಂಬಂಧಿಸಿದಂತೆ ಕೃಷ್ಣರಾಜಸಾಗರ ಜಲಾಶಯದ ಹತ್ತಿರ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರರವರು ಸೀಸ್ಮೋಗ್ರಾಫ್‌ನ್ನು ಅಳವಡಿಸಿರುತ್ತಾರೆ.<br>ದಿನಾಂಕ:23-01-2016ರಂದು ಸೀಸ್ಮೋಗ್ರಾಫ್‌ನಿಂದ ಭೂಕಂಪನ ತರಂಗ ಮತ್ತು ಸ್ಫೋಟಕ ಸಂಬಂಧ ಭೂ-ಅದುರುವಿಕೆಯ ವರದಿಯನ್ನು ಪಡೆಯಲಾಗಿದ್ದು, 2011ರಿಂದ ಸದರಿ ದಿನಾಂಕದವರೆಗೆ ಸೀಸ್ಮೋಗ್ರಾಫ್ ಮಾಪನದಲ್ಲಿ ಅಣೆಕಟ್ಟೆಗೆ ಧಕ್ಕೆ ಆಗಿರುವ ಬಗ್ಗೆ ವರದಿ ಇರುವುದಿಲ್ಲ.<br>ದಿನಾಂಕ:25-09-2018ರಂದು ಮೈಸೂರು, ಪಿರಿಯಾಪಟ್ಟಣ, ಪಾಂಡವಪುರ, ಕೆ.ಆರ್.ಪೇಟೆ ಮತ್ತು ಶ್ರೀರಂಗಪಟ್ಟಣ ಭಾಗಗಳಲ್ಲಿ ದೊಡ್ಡ ಶಬ್ದ ಉಂಟಾಗಿ ಕೆ.ಆರ್.ಎಸ್. ಅಣೆಕಟ್ಟೆಯಲ್ಲಿ ಅಳವಡಿಸಿರುವ ಸೀಸ್ಮೋಗ್ರಾಫ್‌ನಲ್ಲಿ ಸ್ಫೋಟಕ ತರಂಗ ದಾಖಲಾಗಿರುವುದಾಗಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರರವರು ವರದಿ ಮಾಡಿರುತ್ತಾರೆ.<br>ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ರವರ ವರದಿಯ ಮೇರೆಗೆ ಕೆ.ಆರ್.ಎಸ್. ಅಣೆಕಟ್ಟು ಸುರಕ್ಷತೆ ಹಾಗೂ ಸಾರ್ವಜನಿಕರ ಸುರಕ್ಷತಾದೃಷ್ಟಿಯಿಂದ ಜಿಲ್ಲಾಧಿಕಾರಿ, ಮಂಡ್ಯ ಇವರು ಕೆ.ಆರ್.ಎಸ್.ಅಣೆಕಟ್ಟೆಯ ವ್ಯಾಪ್ತಿಯ 20 ಕಿ.ಮೀ.ಅಂತರದಲ್ಲಿ ಯಾವುದೇ ತರಹದ ಸ್ಫೋಟಕಗಳನ್ನು ಬಳಸಿ ಗಣಿಕಾರ್ಯ ನಡೆಸುವುದನ್ನು ನಿಷೇದಿಸಿ ಆದೇಶ ಹೊರಡಿಸಿರುತ್ತಾರೆ. |

ಸಂಖ್ಯೆ: ಸಿಐ 500 ಎಂಎಂಎನ್ 2018

(ರಾಜಶೇಖರ ಬಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು.